

ಬದುಕಿನ ಕೊನೆಯ ಗಳಿಗೆಗಳು: ರೈಲಿನಿಂದ ಇಳಿಯುತ್ತಿರುವ ಮುಗ್ಧ ಮಕ್ಕಳ ಚಿತ್ರ ಕಂಡಾಗ ಕಣ್ಣು ತುಂಬಿ ಬರುತ್ತದೆ.

ನೋಡಿದಾಗ ಏನೂ ಅನ್ನಿಸಲಿಲ್ಲ. ಒಮ್ಮೆ ಕಣ್ಮುಚ್ಚಿದೆ, ಅಷ್ಟೆ. ಕಾಲನ ಪ್ರವಾಹದಲ್ಲಿ ಜೀಕಿ, ಕೈದಿಯಾಗಿ ಇಲ್ಲಿ ನಿಂತಿದ್ದೆ. ಬೆನ್ನ ಮೂಳೆಯಲ್ಲಿ ಚಳಿ ಕಾಣಿಸಿತು. ಈ ಒಂದು ಊಹೆಯೇ ನನ್ನನ್ನು ನಿತ್ರಾಣಗೊಳಿಸಿದರೆ, ಆಗಿನವರ ಪರಿಸ್ಥಿತಿ ಹೇಗಿದ್ದಿರಬಹುದು? ನಾನು ಬೇಕಿದ್ದರೆ, ಹಿಂದಿರುಗಿ ವಾಪಸ್ ಗೇಟ್ ಮೂಲಕ ಹೊರಹೋಗಬಹುದು. ಅದೇ ಕೈದಿಯಾಗಿದ್ದಾಗ, ಊಹೂಂ... ಹಿಂದೆ ಮುಚ್ಚಿದ ಗೇಟ್, ಗುರಿಯಿಟ್ಟ ಬಂದೂಕುಗಳು, ಗನ್ ಹಿಡಿದವರು ಮೃತ್ಯುವಿನ ದಾರಿಯಲ್ಲಿ ಸಾಗಲು ನೀಡುತ್ತಿರುವ ಜೋರು ದನಿಯ ಆದೇಶಗಳು... ಅಬ್ಬಾ! ಮೈ ಜುಮ್ಮೆನ್ನುತ್ತದೆ!

ಈಗ ಈ ಶಿಬಿರವನ್ನು ಮ್ಯೂಸಿಯಂ ಮಾಡಿರುವುದರಿಂದ ಅಲ್ಲಲ್ಲಿ ಲಗತ್ತಿಸಿರುವ ಫಲಕಗಳಲ್ಲಿನ ವಿವರಣೆಗಳು ನಮ್ಮನ್ನು ಹಿಂದಕ್ಕೆ ಕರೆದೊಯ್ದು ಆಗಿನವರ ಮನೋವ್ಯಥೆಯನ್ನು ಮನಸ್ಸಿನಲ್ಲಿ ಮೂಡಿಸುತ್ತದೆ. ಒಂದು ಫಲಕದಲ್ಲಿ, 'ಪೋಲಿಷ್ ಕೈದಿಗಳಲ್ಲಿ ಯಾರಾದರೂ ತಪ್ಪಿಸಿಕೊಂಡರೆ ಅವರ ಕುಟುಂಬದ ಇತರ ಸದಸ್ಯರನ್ನು ಇಲ್ಲಿ ನಿಲ್ಲಿಸಲಾಗುತ್ತಿತ್ತು' ಎಂದಿದೆ. ಇದು ಅನಾಗರಿಕ ಎಂದೆನಿಸಿ, ಮುಂದಿನ ಫಲಕ ನೋಡಿದರೆ, 'ಈ ಶಿಬಿರ ಪ್ರಾರಂಭವಾದ ಐದು ತಿಂಗಳಿನಲ್ಲಿ 9000 ಮಂದಿ ಸತ್ತರು, ಬಹುತೇಕರು ಉಪವಾಸ, ಶ್ರಮದ ಕೆಲಸ ಮತ್ತು ನಾಜಿಗಳ ಕ್ರೂರತೆಯಿಂದಲೇ ಜೀವ ಕಳೆದುಕೊಂಡರು' ಎಂಬುದನ್ನು ಓದುವಾಗ ಮನಸ್ಸು ಖಿನ್ನವಾಗುತ್ತದೆ.

ಫಲಕಗಳ ಪದಗಳಿಗಿಂತ ಹೆಚ್ಚು ನೋವನ್ನು ಉಂಟು ಮಾಡುವುದು ಕಟ್ಟಡದಲ್ಲಿ ಪ್ರದರ್ಶಿಸಿರುವ ವಸ್ತುಗಳು. ಆಶ್ವಿಟ್ಜ್‌ಗೆ ಬಂದು ಪ್ರಾಣ ಕಳೆದುಕೊಂಡವರ ವಸ್ತುಗಳನ್ನು ಗಾಜಿನ ಪರದೆಯ ಹಿಂದೆ ಪೇರಿಸಿಟ್ಟಿದ್ದಾರೆ. ಸೋವಿಯತ್ ಸೇನೆ 1945ರಲ್ಲಿ ಆಶ್ವಿಟ್ಜ್‌ಗೆ ಬಂದು ಉಳಿದಿದ್ದ ಬಂಧಿತರನ್ನು ಬಿಡುಗಡೆ ಮಾಡಿದ ಸಂದರ್ಭದಲ್ಲಿ ಸಿಕ್ಕ ಸುಮಾರು ಏಳು ಸಾವಿರ ಕೆ.ಜಿ.ಗಳಷ್ಟು ಕೂದಲು, ಇಲ್ಲಿಗೆ ಕೈದಿಗಳಾಗಿ ಬರುವಾಗ ತಮ್ಮ ಅಗತ್ಯ ವಸ್ತುಗಳನ್ನು ಹೊತ್ತು ತಂದಿದ್ದ ರಾಶಿ ರಾಶಿ ಸೂಟ್‌ಕೇಸ್‌ಗಳು, ಅವುಗಳ ಮೇಲಿನ ಹೆಸರುಗಳು, ದಿನಾಂಕಗಳು, ನೆಲದಿಂದ ತಾರಸಿಯವರೆಗೂ ಬೆಟ್ಟದಂತೆ ರಾಶಿ ಬಿದ್ದಿರುವ ಶೂಗಳು.

ಮತ್ತೊಂದು ಗಾಜಿನ ಪರದೆಯ ಹಿಂದೆ ಗ್ಯಾಸ್ ಛೇಂಬರ್‌ನಲ್ಲಿ ಉಸಿರುಗಟ್ಟಿಸಿ ಕೊಂದ ವಿಷಾನಿಲ ಜೈಕ್ಲೋನ್ ಬಿ ಹರಳುಗಳ ಸಾವಿರಾರು ತಗಡಿನ ಡಬ್ಬಿಗಳು! ಸತ್ತವರ ರಾಶಿ ರಾಶಿ ಕನ್ನಡಕಗಳು, ಕೃತಕ ಕಾಲುಗಳು, ಬಟ್ಟೆಗಳು, ತಟ್ಟೆಗಳು, ಪಾತ್ರೆಗಳು, ಬಾಚಣಿಗೆ... ನೋಡುವಾಗ ಬದುಕು ಮತ್ತು ಸಾವಿನ ನಡುವಿನ ಗೆರೆಯನ್ನು ಅಳಿಸಿದಂತೆ ಅನ್ನಿಸುತ್ತದೆ. ನಾಜಿ ಕ್ರೌರ್ಯದ ಪರಾಕಾಷ್ಠೆ ಎಂದರೆ ಕೈದಿಗಳ ಮೇಲೆ ಅವರು ನಡೆಸಿರುವ ನರಕ ಸದೃಶ ವೈದ್ಯಕೀಯ ಪ್ರಯೋಗಗಳು. ಮನುಷ್ಯರ ಜೀವದೊಡನೆ ಆಡುವ ಚೆಲ್ಲಾಟದಂತಿರುವ ಅವರ ಒಂದೊಂದು ಪ್ರಯೋಗದ ಬಗ್ಗೆ ತಿಳಿಯುತ್ತಿದ್ದಂತೆ ರಕ್ತ ಹೆಪ್ಪುಗಟ್ಟಿದಂತಾಗುತ್ತದೆ. ಜನವರಿ 27ರ 1945ರಂದು ಸೋವಿಯತ್ ಸೈನ್ಯ ಆಶ್ವಿಟ್ಜ್ ಅನ್ನು ಬಂಧಮುಕ್ತವಾಗಿಸಿದಾಗ ಇಲ್ಲಿ ಹೆಣಗಳ ರಾಶಿಯನ್ನೇ ಅವರು ಕಂಡರಂತೆ!

ಹೊರಗೆ ನೆಲಮಟ್ಟದ ಒಂದು ಕಟ್ಟಡವಿದೆ. ಅದರ ಮೇಲೆಲ್ಲಾ ಹಸಿರು ಹುಲ್ಲು ಆವರಿಸಿದ್ದು, ಇಟ್ಟಿಗೆಯ ಚಿಮಣಿಯೊಂದು ಕಂಬದಂತೆ ಹೊರಕ್ಕೆ ಇಣುಕಿತ್ತು. ಶಸ್ತ್ರಾಗಾರವಾಗಿದ್ದ ಇದನ್ನು ಗ್ಯಾಸ್ ಛೇಂಬರ್ ಮಾಡಿದ್ದರು. 'ಸಾವಿರಗಟ್ಟಲೆ ಜನ ಪ್ರಾಣ ಕಳೆದುಕೊಂಡ ಸ್ಥಳವಿದು. ಮೌನದಿಂದ ಇದ್ದು ಸ್ಥಳದ ಘನತೆ ಕಾಪಾಡಿ' ಎನ್ನುವ ಫಲಕ ನಮ್ಮನ್ನು ಎದುರುಗೊಳ್ಳುತ್ತದೆ. 150 ಅಡಿ ಉದ್ದ, 20 ಅಡಿ ಅಗಲ, 10 ಅಡಿ ಎತ್ತರದ ಮಬ್ಬುಗತ್ತಲಿನ ಕೋಣೆ. ಬಣ್ಣಗೆಟ್ಟ ಗೋಡೆಗಳು, ತಾರಸಿಯಲ್ಲಿ ಅಲ್ಲಲ್ಲಿ 'ಶವರ್'ನಂತೆ ಕಾಣುವ ಜೈಕ್ಲೋನ್ ಬಿ ವಿಷದ ಗ್ಯಾಸ್ ಹರಿಸುವ ಪೈಪ್‌ಗಳು. ಒಳಕೋಣೆಯಲ್ಲಿ ಸತ್ತವರನ್ನು ಸುಡುವ ಎರಡು ಚಿತಾಗಾರಗಳು. ಪ್ರತಿ ದಿನ 350 ದೇಹಗಳನ್ನು ಸುಡುತ್ತಿದ್ದರಂತೆ. 1941ರ ಹೊತ್ತಿಗೆ ಇದು ಅವರಿಗೆ ಸಾಲದಾಯಿತು. ಸಾಯುವವರ ಸಂಖ್ಯೆ ಹೆಚ್ಚಾಯಿತೆಂದು ಇನ್ನೂ ದೊಡ್ಡ ಚಿತಾಗಾರವನ್ನು ನಿರ್ಮಿಸಿದರು. ಸಂಖ್ಯೆ ಎನ್ನುವಾಗ ವಿಷಾದ ಆವರಿಸುತ್ತದೆ.

ದೊಡ್ಡ ಚಿತಾಗಾರಗಳನ್ನು ನಿರ್ಮಿಸಲು ಅವರು ಆರಿಸಿಕೊಂಡ ಜಾಗ ಆಶ್ವಿಟ್ಜ್‌ನಿಂದ ಎರಡು ಮೈಲಿ ದೂರದಲ್ಲಿರುವ ಹಳ್ಳಿ ಬರ್ಕನೌ. ಅಲ್ಲಿ ವಾಸಿಸುತ್ತಿದ್ದವರನ್ನು ಹೊರಗಟ್ಟಿ, ಅವರ ಮನೆಯ ಇಟ್ಟಿಗೆಗಳನ್ನೇ ಬಳಸಿ, ಹೊಸ ಶಿಬಿರಗಳನ್ನು ನಿರ್ಮಿಸಿದರು. 170 ಹೆಕ್ಟೇರ್ ಪ್ರದೇಶದಲ್ಲಿ ಸುಮಾರು 300 ಶೆಡ್‌ಗಳನ್ನು ನಿರ್ಮಿಸಿದರು.

ಪಳೆಯುಳಿಕೆಗಳಂತೆ ಈಗ ಉಳಿದಿರುವ ಕೆಲವಾರು ಶೆಡ್‌ಗಳು, ಸುತ್ತ ಎಳೆದಿರುವ ಮುಳ್ಳು ಬೇಲಿ, ಉದ್ದುದ್ದವಾಗಿ ಮಲಗಿರುವ ರೈಲ್ವೆ ಹಳಿಗಳು, ಉದ್ದನೆಯ ನಿಲ್ದಾಣ ನೋಡುತ್ತಿದ್ದಂತೆ ಶಿಂಡ್ಲರ್ಸ್ ಲಿಸ್ಟ್ ಚಲನಚಿತ್ರ ಕಣ್ಮುಂದೆ ಬಂದಿತು. ಒಂದು ದಿನಕ್ಕೆ 7000 ಮಂದಿಯನ್ನು ಸುಡುತ್ತಿದ್ದ ಗ್ಯಾಸ್ ಛೇಂಬರ್‌ಗಳು ಐದು ಇಲ್ಲಿದ್ದವು.



ಬರ್ಕನೌ : ರೈಲಿನಲ್ಲಿ ತುಂಬಿ ತರುತ್ತಿದ್ದ ಕೈದಿಗಳ ನಿಟ್ಟುಸಿರನ್ನು ಧ್ವನಿಸುವ ಹಳಿಗಳು